**ದಿನಾಂಕಃ 07–01–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು ಡಿ ಡಿ ವಕೀಲರಿಂದಃ**

ನಿ ಪಿ –32 ದಾಖಲೆಯನ್ನು ಎಫ್ ಎಸ್ ಎಲ್ ಗೆ ಕಳುಹಿಸಿಲ್ಲ ಎಂದರೆ ನಿಜ. ನಿ ಪಿ –32 ರಲ್ಲಿಯ ಸಹಿಯ ಜೊತೆ ನಿ ಪಿ –33 ದಾಖಲೆಯಲ್ಲಿರುವ ಸಹಿಯನ್ನು ಕಳುಹಿಸುವುದು ತುಂಬಾ ಅವಶ್ಯಕತೆ ಇತ್ತು ಎಂದರೆ ಸರಿಯಲ್ಲ. ನಿ ಪಿ –32 ರಲ್ಲಿರುವ ಸಹಿ ಬ್ಯಾಂಕ್ ಮ್ಯಾನೇಜರ್ ಆದ ನವಲಗುಂದ ರವರ ಸಹಿಯಾಗಿದ್ದು ಅವರನ್ನು ಸಹ ಈ ಕೇಸಿನಲ್ಲಿ ಆರೋಪಿತನನ್ನಾಗಿ ಸೇರಿಸಬೇಕಾಗಿತ್ತು ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಒತ್ತಡದಿಂದ ಆತನನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಬ್ಯಾಂಕ್ ಸಾಲದ ಮೊತ್ತವನ್ನು ವರ್ಧಮಾನ್ ಕೋ ಆಪರೇಟಿವ್ ಬ್ಯಾಂಕ್ ನ ಮ್ಯಾನೇಜರ್ ರಾದ ನವಲಗುಂದ ರವರು ಆರೋಪಿತನಿಂದ ಪಡೆದುಕೊಂಡು ಕ್ಲೀಯರೆನ್ಸ ಲೆಟರ್ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಲದ ಮೊತ್ತ ಪಡೆದುಕೊಂಡು ನಂತರ ನವಲಗುಂದ ರವರು ಬೋಜಾ ಕಡಿಮೆ ಮಾಡಲು ರಿಲೀಜ್ ಆಫ್ ಡಿಪಾಸಿಟ್ ಟೈಟಲ್ ಡೀಡ್ ಗೂ ಸಹಿ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ನವಲಗುಂದ ರವರ ಸಹಿ ನಿ ಪಿ –33 ರಲ್ಲಿರುವ ಸಹಿಯಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ನವಲಗುಂದ ರವರು ನಿ ಪಿ –32 ರಂತೆ ವಿನಾಯಿತಿ ಪತ್ರಕ್ಕೂ ಸಹ ಸಹಿ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಆರೋಪಿತ ಸಬ್ ರಿಜಿಸ್ಟರ್ ರವರ ಮುಂದೆ ಹಾಜರುಪಡಿಸಿ ಬೋಜಾ ನೊಂದಣಿ ಮಾಡಿಸಿದ್ದಾನೆ ಎಂದರೆ ಸರಿಯಲ್ಲ. ನಾನು ತನಿಖಾ ಕಾಲದಲ್ಲಿ ಸಬ್ ರಿಜಿಸ್ಟರ್ ರವರು ಕಾನೂನು ಬದ್ಧವಾಗಿ ನೊಂದಣಿಯಾಗಿದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

2. ನನ್ನ ತನಿಖಾ ಕಾಲದಲ್ಲಿ ಆರೋಪಿತ ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಸಹ ಆರೋಪಿತನ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಲ್ಲಾ ದಾಖಲೆಗಳನ್ನು ಈ ಕೇಸಿಗೆ ಅನುಕೂಲಕ್ಕಾಗಿ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಕೇಸಿನಲ್ಲಿ ಎಫ್ ಎಸ್ ಎಲ್ ಅಧಿಕಾರಿಗಳನ್ನು ಸಾಕ್ಷಿದಾರರನ್ನಾಗಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ನಾನು ಅವರನ್ನು ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾ ಕಾಲಕ್ಕೆ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.